ದಿನಬಿಟ್ಟು ದಿನ ಬರೋಕೆ ಶುರುವಾಯ್ತು. ವಿಷ್ಯ ಏನಿರ್ತಿರ್ಲಿಲ್ಲ. 'ಇಲ್ವಾ? ಏನೂ ಇಲ್ವಾ?'

ಅತ್ತೆ ಸಣ್ಣಗೆ ಪೂಜೆ ಪಾರಾಯಣ ಅಂತ ಶುರುಮಾಡಿದ್ರು. ಗುರುವಾರ, ಶನಿವಾರ, ಅಮವಾಸೆಗಲ್ಲಿ ಪೂಜೆ, ಹುಣ್ಣಿಮೆಗಿಲ್ಲಿ. ವೈಯಕ್ತಿಕ ಬದುಕು ಸತ್ತು ಹೋಯ್ತು. ಗಂಡ ಬಹಳ ಸಭ್ಯ. ಚಟಗಳು ಇರ್ಲಿಲ್ಲ. ಕೋಪವೇ ಬರ್ದಿದ್ದ ಶಾಂತಮೂರ್ತಿ. ವೃತ್ತಿ ಹುದ್ದೆ ಅಂತ ಅಂಟಿಕೊಂಡ ಮೇಲೆ ಸಣ್ಣಾಪುಟ್ಟ ಪಾರ್ಟಿ ಅಂತ ಶುರುವಾಗಿತ್ತು. ಪಾನಪೇಯ ಸಮೃದ್ಧವಾಗಿ ಸರಬರಾಜಾಗ್ತಿತ್ತು. ನಿಧಾನಕ್ಕೆ ಸ್ವಲ್ಪ ಹೆಚ್ಚಾಗ್ತಾ ಹೋಯ್ತು. ಶಾಂತಮೂರ್ತಿ ಆಗಾಗ ಸಿಡುಕೋಕೆ ಶುರುಮಾಡ್ದ.

ಅತ್ತೆ ಅಂದ್ರು, "ಅವನಿಗೆ ಮಕ್ಳು ಅಂದ್ರೆ ಬಹಳ ಇಷ್ಟ ಕಣೇ. ಬಾಯ್ಬಿಟ್ಟು ಹೇಳಲ್ಲ. ಅದೇ ಬದ್ಲಾಗ್ತಾ ಇದ್ದಾನೆ. ಜೋಪಾನ."

ಅಮ್ಮ ಅಂದ್ಲು, "ಗಂಡು ಬೆನ್ನತ್ತಿ ಕಾಡಿ ಹಿಡೀತಾನೆ ಹೆಣ್ಣನ್ನ ಸುಖಕ್ಕೆ. ಸುಖಿಸಿ ಆಯ್ತಾ, ಅಲ್ಲಿಗೆ ಮುಗಿಯಿತು. ಮುಂದಿಂದು ಹೆಣ್ಣಿನ ಜವಾಬ್ದಾರಿ. ಜೀವನದುದ್ದಕ್ಕೂ ಅವನನ್ನು ಹಿಡಿದಿಟ್ಕೋಬೇಕು."

ಒಂದು ಕೆಲ್ಸಕ್ಕೆ ಹೋಗ್ತಿದ್ಲು. ಎಂ.ಕಾಂ. ಆಗಿತ್ತು. ಪಾರ್ಟ್‌ಟೈಮ್ ಲೆಕ್ಚರರ್ ಆಗಿದ್ಲು. ಹಣದ ಅವಶ್ಯಕತೆ ಇರ್ಲಿಲ್ಲ. ಆದ್ರೆ ಪ್ರವೃತ್ತಿ! ವಾರಕ್ಕೆ ಎಂಟು ಅವರ್ ಕ್ಲಾಸು. ಸುಖ ಇರ್ತಿತ್ತು. ಅದು ಬಿಟ್ಲು. ಸ್ನೇಹಿತರ ಜೊತೆ ಓಡಾಟ ಇತ್ತು. ಇಲ್ಲಿ ಮಾಲು; ಅಲ್ಲಿ ಥಿಯೇಟ್ರು ಅದು ಬಿಟ್ಲು. 24 ಗಂಟೆ ಒಂದೇ ವರಾತ  ಮಗು... ಮಗು...

ಡಾಕ್ಟ್ರು ಎದ್ರು ಕೂತು ಅಲವತ್ತುಕೊಂಡ್ಲು, "ನನಗೊಂದು ಮಗು ಕೊಡಿ. ಏನಾದ್ರೂ ಮಾಡಿ. ನನಗೊಂದು ಮಗು ಕೊಡಿ."

"ಸಮಸ್ಯೆ ಏನಿಲ್ಲ, ವಿಜ್ಞಾನ ಮುಂದುವರ್ದಿದೆ. ಸಾಕಷ್ಟು ಚಿಕಿತ್ಸೆಗಳು ಬಂದಿದೆ. ಕೆಲವರಿಗೆ ಸ್ವಾಭಾವಿಕವಾಗಿ ಆಗಲ್ಲ. ವಯಸ್ಸಾಗ್ತಿದ್ದ ಹಾಗೆ ಸ್ವಲ್ಪ ಕಷ್ಟ. ಅಲ್ಲದೇ ಬದುಕು ಬದ್ಲಾಗಿದೆ. ಪ್ರಯತ್ನಿಸೋಣ. ನೀನು, ನಿನ್ನ ಗಂಡ ಕೋಆಪರೇಟ್ ಮಾಡ್ಬೇಕು. ಶುರುವಾಯ್ತು. ವಾರಕ್ಕೆರಡು ಸಾರ್ತಿ ನರ್ಸಿಂಗ್ ಹೋಂ ಎಡತಾಕೋದು. ಕೃತಕ ಗರ್ಭಧಾರಣೆಯ ಸಂಭ್ರಮ ಶುರುವಾಗಿತ್ತು. ಮೊದಲಿಗೆ ಗಂಡ ಏನನ್ಲಿಲ್ಲ. ಪ್ರೀತಿಯಾಗೇ ಇದ್ದ. ಒಂದೆರಡು ಸಾರ್ತಿ ಹೋಗಿ ಬಂದ ಮೇಲೆ ಭಾವ ಸ್ವಲ್ಪ ಬದ್ಲಾಗಿತ್ತು. 'ನಿನ್ನ ಕರ್ಮ ನನ್ನ ನರಳಿಸ್ತೀಯಾ.' ಅವನನ್ಲಿಲ್ಲ. ಆದ್ರೆ ಮಲೆನಾಡ ಸೆರಗಲ್ಲಿ ಬೆಳೆದ ಮಂದಾಕಿನಿಗೆ ಪ್ರಾಣಿ, ಪಕ್ಷಿಗಳ ಮುಖಭಾವವೇ ಅರ್ಥವಾಗ್ತಿತ್ತು. ಇವನದ್ದು ಸಮಸ್ಯೆ ಅಂತ ಅನ್ನಿಸ್ಲಿಲ್ಲ.

ಮಕ್ಕಳಾಗದ್ದು ಹೆಣ್ಣಿನ ಕರ್ಮ ಅಲ್ವಾ? ಇವಳಿಗನ್ನಿಸ್ತು! ವಿವರ ಅಪ್ರಸ್ತುತ. ಒಂದೇ ಮಾತಲ್ಲಿ ಹೇಳೋದಾದ್ರೆ, 'ವಿಜ್ಞಾನದಲ್ಲಿ ಹೆಂಗಸು, ದನ ಎರಡೂ ಒಂದೇ.' ಕೃತಕ ಗರ್ಭಧಾರಣೆ ವಿಷಯದಲ್ಲಿ! ಸುಖದ ಕ್ರಿಯೆಯ ಸೃಷ್ಟಿಯಲ್ಲಿ ಪರ್ಯವಸಾನವಾದರೆ ಎಲ್ಲವೂ ಸಲೀಸು ಸಂಭ್ರಮ. ಸೃಷ್ಟಿಗೇ ಅಂತ ಬಲವಂತವಾಗಿ ಮೈಯೊಡ್ಡಿದ್ರೆ ಎಲ್ಲಾ ನೋವು, ಸಂಕಟವೇ. ಅಲ್ಲಿ ಮರೆ ಇರೊಲ್ಲ. ಇಲ್ಲಿರುತ್ತೆ ಅಷ್ಟೇ.

ಬಸುರಾದ್ಲು ಮಂದಾಕಿನಿ. ಕುಣುದ್ರು. ಎಲ್ಲಾ ಕುಣುದ್ರು. ಎಲ್ಲರಿಗೂ ಸಂಭ್ರಮ. ಏಳಬೇಡ, ಕೂತ್ಕೋ. ಮೆಟ್ಲಹತ್ಬೇಡ, ಬಗ್ಗಬೇಡ, ಹೆಚ್ಚು ನಿದ್ದೆ ಮಾಡ್ಬೇಡ, ಬಹಳ ಹೊತ್ತು ಎಚ್ಚರವಾಗಿರ್ಬೇಡ, ಓದ್ಬೇಡ, ಬರೀಬೇಡ... ಬೇಡಗಳ ಸಂತೆ.

ಡಾಕ್ಟ್ರು ಅಂದ್ರು ಇದು ತಿನ್ಬೇಡ, ಅದು ತಿನ್ಬೇಡ. ಬೆಳಗ್ಗೇನೆ ಈ ಮಾತ್ರೆ, ಮಧ್ಯಾಹ್ನ ಈ ಮಾತ್ರೆ,